ದೂರವಾಣಿ ಸಂಖ್ಯೆ : 2419677/2419361
ಫ್ಯಾಕ್ಸ್: 0821-2419363/2419301

email : registrar@uni-mysore.ac.in
www.uni-mysore.ac.in

ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

ವಿಶ್ವವಿದ್ಯಾನಿಲಯಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570005

ದಿನಾಂಕ: 05-01-2024

ಸಂಖ್ಯೆ: ಎಸಿ6/159/2020-21

## ಅಧಿಸೂಚನೆ

ವಿಷಯ:- 2023-24ನೇ ಶೈಕ್ಷಣಿಕ ಸಾಲಿನ ಬಿ.ಎಡ್. (CBCS & CAGP) ಪ್ರೋಗ್ರಾಂನ ಶೈಕ್ಷಣಿಕ ವೇಳಾಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ:- 1. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು ಇವರ ಆದೇಶ ಸಂಖ್ಯೆ:ಸಿಎಸಿ-05/ಬಿ.ಇಡಿ.ದಾ-12/2023-24 ದಿನಾಂಕ 31.10.2023.

2. ಪ್ರೊ.ಎಸ್.ಮದಿಅಳಗನ್, ಡೀನರು, ಶಿಕ್ಷಣ ನಿಕಾಯ, ಇವರ ಅಧ್ಯಕ್ಷತೆಯಲ್ಲಿ ದಿನಾಂಕ 20-12-2023 ರಂದು ನಡೆದ ಪ್ರಾಂಶುಪಾಲರ ಸಭೆಯ ತೀರ್ಮಾನ.

* * * * *

2023-24ನೇ ಶೈಕ್ಷಣಿಕ ಸಾಲಿನ ಪ್ರಥಮ ಹಾಗೂ ದ್ವಿತೀಯ ವರ್ಷದ ಬಿ.ಇಡಿ. (CBCS & CAGP) ಪ್ರೋಗ್ರಾಂನ ಶೈಕ್ಷಣಿಕ ವೇಳಾಪಟ್ಟಿಯನ್ನು ಈ ಮುಂದಿನಂತೆ ಅಧಿಸೂಚಿಸಲಾಗಿದೆ.

## 2 Years B.Ed PROGRAMME CALENDER EVENTS FOR THE YEAR 2023-2024

### I & III Semester

| | | |
|---|---|---|
| 1 | Commencement of I Semester | 22-01-2024 |
| 2 | Commencement of III Semester | 08-01-2024 |
| 3 | MAAC Visit | 16-05-2024 to 23-05-2024 |
| 4 | Last Working day I Semester<br>III Semester | 11-06-2024<br>25-05-2024 |
| 5 | Study Holidays for Student Teachers only<br>I Semester<br>III Semester | <br>12-06-2024 to 18-06-2024<br>26-05-2024 to 18-06-2024 |
| 6 | University Examination | 19-06-2024 to 26-06-2024 |
| 7 | Mid-term Holidays for Teacher Educators & Student Teachers and Evaluation work (Mandatory for all Teacher Educators) | 27-06-2024 to 14-07-2024 |

### II & IV Semester

| | | |
|---|---|---|
| 1 | Commencement of II & IV Semester | 15-07-2024 |
| 2 | MAAC Visit | 21-11-2024 to 26-11-2024 |
| 3 | Last Working day | 30-11-2024 |
| 4 | Study Holidays for Student Teachers only | 02-12-2024 to 09-12-2024 |
| 5 | University Examination | 10-12-2024 to 13-12-2024 |
| 6 | Evaluation work | 14-12-2024 To 24-12-2024 |
| 7 | Term Holidays for Teacher Educators and Student Teachers till the Re-opening day of Next Academic year 2045-25 as Specified by the University | 25-122024 onwards |

CamScanner

**ಸೂಚನೆಗಳು:-**

1. ವಿಶ್ವವಿದ್ಯಾನಿಲಯದ ವಿನಿಯಮಗಳಿಗೆ ಅನುಗುಣವಾಗಿ ಹಾಜರಾತಿ ನಿಬಂಧನೆಗಳನ್ನು ಅಭ್ಯರ್ಥಿಗಳ ಗಮನಕ್ಕೆ ತರತಕ್ಕದ್ದು. ಒಂದು ವೇಳೆ ನಿಗದಿತ ಅವಧಿಯಲ್ಲಿ ಪಾಠ ಪ್ರವಚನಗಳನ್ನು ಮುಗಿಸಲು ಸಾಧ್ಯವಾಗದಿದ್ದಲ್ಲಿ ಅದನ್ನು ರಜಾ ದಿನಗಳಂದು ವಿಶೇಷ ತರಗತಿಗಳನ್ನು ತೆಗೆದುಕೊಂಡು ಸರಿದೂಗಿಸಿ ಪೂರ್ಣಗೊಳಿಸತಕ್ಕದ್ದು.

2. ಬಿ.ಇಡಿ. ಪ್ರವೇಶಾತಿಗಳಿಗೆ ಸಂಬಂಧಿಸಿದಂತೆ ನಿಗದಿಪಡಿಸಿದ ನಿಯಮಾವಳಿಗಳನ್ನು (ಮೀಸಲಾತಿ ಒಳಗೊಂಡಂತೆ) ಹಾಗೂ ನಂತರ ಪ್ರಕಟಿಸಿರುವ ಅಧಿಸೂಚನೆಗಳು/ ಸುತ್ತೋಲೆಗಳು ಮತ್ತು ವಿಶ್ವವಿದ್ಯಾನಿಲಯದ ವಿನಿಯಮ/ನಿಯಮಗಳನ್ನು ಪ್ರವೇಶಾತಿ ಹಂತದಲ್ಲಿ ಕಡ್ಡಾಯವಾಗಿ ಪಾಲಿಸತಕ್ಕದ್ದು.

3. ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಮಂಡಳಿಯವರು ಸಂಯೋಜನಾ ಮಂಜೂರಾತಿ ಆದೇಶದಲ್ಲಿ ನಿಗದಿಪಡಿಸಿರುವ ಪ್ರವೇಶಾತಿ ಸಂಖ್ಯಾ ಮಿತಿಯೊಳಗೆ ಪ್ರವೇಶ ಮಾಡಿಕೊಳ್ಳತಕ್ಕದ್ದು. ಇದನ್ನು ಮೀರಿ ಹೆಚ್ಚುವರಿಯಾಗಿ ಪ್ರವೇಶ ಮಾಡಿಕೊಂಡಲ್ಲಿ ಅದಕ್ಕೆ ಪ್ರಾಂಶುಪಾಲರು ಮತ್ತು ಆಡಳಿತ ಮಂಡಳಿಯವರೇ ನೇರ ಹೊಣೆಗಾರರಾಗಿರುತ್ತಾರೆ. ಯಾವುದೇ ಕಾರಣಕ್ಕೂ ಹೆಚ್ಚುವರಿ ಪ್ರವೇಶಾತಿಗೆ ವಿಶ್ವವಿದ್ಯಾನಿಲಯವು ಅನುಮೋದನೆ ನೀಡಲಾಗುವುದಿಲ್ಲವೆಂದು ತಿಳಿಸಿದೆ.

4. ವಿಶ್ವವಿದ್ಯಾನಿಲಯ ನಿಗದಿಪಡಿಸಿರುವ ಪ್ರವೇಶ ಸಂಖ್ಯೆಗಿಂತ ಹೆಚ್ಚಾಗಿ ಕೇಂದ್ರಿಯ ದಾಖಲಾತಿ ಘಟಕ, ಬೆಂಗಳೂರು ಇವರು ಹಂಚಿಕೆ ಮಾಡಿದಲ್ಲಿ ಈ ವಿಷಯವನ್ನು ಕಾಲೇಜು ಅಭಿವೃದ್ಧಿ ಮಂಡಳಿಯವರ ಗಮನಕ್ಕೆ ತಂದು ವಿಶ್ವವಿದ್ಯಾನಿಲಯ ನಿಗದಿಪಡಿಸಿರುವ ಪ್ರವೇಶಾತಿ ಸಂಖ್ಯೆಯ ಮಿತಿಯೊಳಗೆ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದು.

5. ಬಿ.ಎಡ್. ಕೋರ್ಸಿಗೆ ಅರ್ಹ ಅಭ್ಯರ್ಥಿಗಳು ಮಾತ್ರ ಪ್ರವೇಶ ಪಡೆದಿದ್ದಾರೆಂದು ಖಚಿತಪಡಿಸಿಕೊಳ್ಳುವ ಹೊಣೆ ಸಂಸ್ಥೆಯ ಮುಖ್ಯಸ್ಥರದ್ದು. ಅನರ್ಹ ಅಭ್ಯರ್ಥಿಗಳ ಪ್ರವೇಶಕ್ಕೆ ವಿಶ್ವವಿದ್ಯಾನಿಲಯವು ಯಾವುದೇ ಕಾರಣಕ್ಕೂ ಜವಾಬ್ದಾರಿಯಾಗುವುದಿಲ್ಲ.

6. ಹೊರ ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳ ಪ್ರವೇಶವನ್ನು ವಿಶ್ವವಿದ್ಯಾನಿಲಯದಿಂದ ವಿತರಿಸಲಾದ ಅರ್ಹತಾಪತ್ರ ಹಾಜರುಪಡಿಸಿದ ನಂತರ ಮಾಡಬೇಕು.

7. ಸಂಸ್ಥೆಯ ಮುಖ್ಯಸ್ಥರು ಸರ್ಕಾರ ನಿಗದಿಪಡಿಸಿರುವ ಪ್ರವೇಶ ಮಿತಿ, ಮೀಸಲಾತಿ ನಿಯಮಗಳು ಹಾಗೂ ಇನ್ನಿತರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದು.

8. ಕೇಂದ್ರೀಕೃತ ದಾಖಲಾತಿ ಘಟಕದ ಮೂಲಕ ಆಯ್ಕೆಯಾದ ಅಭ್ಯರ್ಥಿಗಳು ಮತ್ತು ಆಡಳಿತ ಮಂಡಳಿಯಿಂದ ಆಯ್ಕೆಯಾದ ಅಭ್ಯರ್ಥಿಗಳು ಪ್ರವೇಶ ಪಡೆಯಲು ಕಡೆಯ ದಿನಾಂಕ : **20-01-2024.**

9. National Council for Teacher Education (NCTE) ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಮಂಡಳಿ ಇವೆರಡು ನೀಡಿರುವ ಸಂಯೋಜನಾ ದೃಢೀಕರಣ ಪ್ರತಿ ಹಾಗೂ ವಿದ್ಯಾರ್ಥಿಗಳ ಮೂಲ ದಾಖಲಾತಿಗಳಾದ ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಎಲ್ಲಾ ಮೂಲ ಅಂಕಪಟ್ಟಿಗಳನ್ನು ಪ್ರವೇಶಾತಿ ಅನುಮೋದನೆ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯಕ್ಕೆ ಕಡ್ಡಾಯವಾಗಿ ಸಲ್ಲಿಸುವುದು (10+2+3 ಮಾದರಿ).

CS CamScanner

10. ಪ್ರವೇಶ ಪಡೆದ ಅಭ್ಯರ್ಥಿಗಳ ಹೆಸರು ಹಾಗೂ ಪದವಿ/ ಸ್ನಾತಕೋತ್ತರ ಪದವಿ ಕೋರ್ಸ್‌ಗಳಲ್ಲಿ ಅಭ್ಯಾಸ ಮಾಡಿರುವ ಐಚ್ಛಿಕ ವಿಷಯಗಳು ಇತ್ಯಾದಿ ವಿವರಗಳನ್ನು UUCMSನಲ್ಲಿ ಭರ್ತಿಮಾಡಿ, Consolidated list ನ್ನು ಪರಿಶೀಲಿಸಿ ನಂತರ ಪ್ರಿಂಟ್ ತೆಗೆಯತಕ್ಕದ್ದು, ಏಕೆಂದರೆ ಪ್ರಾಂಶುಪಾಲರ loginನಿಂದ ವಿಶ್ವವಿದ್ಯಾನಿಲಯದ ಅನುಮೋದನೆಗೆ (Admission Submit to University) ಸಲ್ಲಿಕೆಯಾದ ನಂತರ ಯಾವುದೇ ತಿದ್ದುಪಡಿಗೆ ಅವಕಾಶವಿರುವುದಿಲ್ಲ. ಅಂತಹ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ರದ್ದುಪಡಿಸಬಹುದಾಗಿದೆ. UUCMSನಲ್ಲಿ ಭರ್ತಿಮಾಡಿದ Consolidated list ನ್ನು (A3 ಸೈಜ್ ಪೇಪರ್‌ನಲ್ಲಿ-ದ್ವಿಪ್ರತಿಗಳಲ್ಲಿ) ಪ್ರಿಂಟ್ ತೆಗೆದು ಹಾಗೂ ಇನ್ನಿತರ ಮೂಲ ದಾಖಲಾತಿಗಳನ್ನು ದಿನಾಂಕ 31-01-2024ರ ಒಳಗೆ ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ತಲುಪಿಸುವುದು.

11. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಕ್ಕೆ ಪಾವತಿಸಬೇಕಾಗಿರುವ ಪ್ರವೇಶ ಶುಲ್ಕಗಳ ವಿವರವನ್ನು (ಪಟ್ಟಿ ಮತ್ತು ಶುಲ್ಕದ ಮೊತ್ತವನ್ನು) ಪ್ರತ್ಯೇಕವಾಗಿ ಪಟ್ಟಿ ಮಾಡಿ ಸಲ್ಲಿಸಬೇಕು ಹಾಗೂ ಈ ಹಿಂದಿನ ಶೈಕ್ಷಣಿಕ ಸಾಲಿನಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಂದ ವಿಶ್ವವಿದ್ಯಾನಿಲಯಕ್ಕೆ ಬಾಕಿ ಬರಬೇಕಾದಲ್ಲಿ ಸದರಿ ಬಾಬ್ತುಗಳು ಸಮಾಜ ಕಲ್ಯಾಣ ಇಲಾಖೆಯಿಂದ ಮರುಪಾವತಿಸಿದ್ದಲ್ಲಿ ಇದನ್ನು ವಿಶ್ವವಿದ್ಯಾನಿಲಯಕ್ಕೆ ಪಾವತಿಸಿ ಅದರ ಚಲನ್ ಅನ್ನು ಪ್ರವೇಶಾತಿ ಅನುಮೋದನೆ ಪಟ್ಟಿಯೊಂದಿಗೆ ಸಲ್ಲಿಸುವುದು.

12. ಕೇಂದ್ರ ಸರ್ಕಾರ, National Council for Teacher Education (NCTE) ರಾಜ್ಯ ಸರ್ಕಾರ, ಲೋಕ ಸಭೆ ಮತ್ತು ವಿಧಾನ ಸಭೆ ಸದಸ್ಯರುಗಳಿಂದ ಆಗಿಂದಾಗ್ಗೆ ಕೋರುವ ಮಾಹಿತಿಗಳನ್ನು ನಿಗದಿತ ನಮೂನೆಗಳಲ್ಲಿ ನಿಖರವಾಗಿ ಕಡ್ಡಾಯವಾಗಿ ನೀಡಬೇಕು. ಸದರಿ ಮಾಹಿತಿಯಲ್ಲಿ ಏನಾದರೂ ತಪ್ಪುಗಳಿದ್ದಲ್ಲಿ ಅದಕ್ಕೆ ಪ್ರಾಂಶುಪಾಲರೇ ಜವಾಬ್ದಾರರಾಗಿರುತ್ತಾರೆ.

13. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 61ರಂತೆ ವಿಶ್ವವಿದ್ಯಾನಿಲಯದಿಂದ ಪ್ರವೇಶಾತಿ ಅನುಮೋದನೆಯಾಗದ ವಿದ್ಯಾರ್ಥಿಯು ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿರುವುದಿಲ್ಲ. ಈ ಅಂಶವನ್ನು ಕಾಲೇಜಿನ ಪ್ರಾಂಶುಪಾಲರು ಕಡ್ಡಾಯವಾಗಿ ಪಾಲಿಸುವುದು.

14. ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕಗಳನ್ನು ದಿನಾಂಕ 31.01.2024 ರೊಳಗೆ ವಿಶ್ವದ್ಯಾನಿಲಯದ ಶುಲ್ಕಪಟ್ಟಿಯನುಸಾರ ನಿಗದಿಪಡಿಸಿರುವ ಈ ಕೆಳಕಂಡ ಖಾತೆಗಳಿಗೆ ಜಮಾ ಮಾಡುವುದು.

| ಕ್ರಮ ಸಂಖ್ಯೆ | ಖಾತೆ ಹೆಸರು ಮತ್ತು ಖಾತೆ ಸಂಖ್ಯೆ | ಶುಲ್ಕಗಳ ಪಾವತಿ ವಿವರ |
|---|---|---|
| 1 | General Revenue A/c (GRA )<br>54007591471 | 1. ನೊಂದಣಿ ಶುಲ್ಕ<br>2 ವಿಶೇಷ ಶುಲ್ಕ<br>3. ಯು.ಇ.ಐ.ಜಿ.ಬಿ.<br>4. ಸಾಂಸ್ಕೃತಿಕ ಚಟುವಟಿಕೆಗಳ ಶುಲ್ಕ<br>5. ಕ್ರೀಡಾಭಿವೃದ್ಧಿ ಶುಲ್ಕ<br>6. ವಿದ್ಯಾರ್ಥಿ ಕ್ಷೇಮ ನಿಧಿ,<br>7. ವಿದ್ಯಾರ್ಥಿ ಸಹಾಯ ನಿಧಿ.<br>8. ಎನ್.ಎಸ್.ಎಸ್ ಶುಲ್ಕ<br>9. ಮರು ಪ್ರವೇಶ ಶುಲ್ಕ<br>10. ದಂಡ ಶುಲ್ಕ |
| 2 | Infrastructure Development Fund A/c<br>54007591324 | ಮೂಲಭೂತ ಸೌಕರ್ಯ / ವಿಶ್ವವಿದ್ಯಾನಿಲಯ ಸಪೋರ್ಟ್ ಶುಲ್ಕ |
| 3 | Information Infrastructure Development Fund A/c<br>54007592714 | ಇನ್‌ಫರ್‌ಮೇಷನ್ ಇನ್‌ಫ್ರಾಸ್ಟ್ರಕ್ಚರ್ ಶುಲ್ಕ |

CamScanner

15. ಮೇಲೆ ತಿಳಿಸಿರುವಂತೆ ಶುಲ್ಕಗಳನ್ನು ಆಯಾ ಖಾತೆಗಳಿಗೆ ಡಿಮ್ಯಾಡ್ ಡ್ರಾಫ್ಟ್(DD)/ಪೇ ಆರ್ಡರ್‌ನ್ನು ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಹೆಸರಿಗೆ ಪಡೆದು ವಿಶ್ವವಿದ್ಯಾನಿಲಯದ ಚಲನ್‌ಗಳ ಮೂಲಕ ಬ್ಯಾಂಕ್‌ಗೆ ಪಾವತಿಸಿ ಚಲನ್‌ನ್ನು ಸಲ್ಲಿಸತಕ್ಕದ್ದು.

16. ಪ್ರವೇಶಾತಿ ಪಟ್ಟಿಯಲ್ಲಿ ಮೊದಲು ಸರ್ಕಾರಿ ಕೋಟಾ (Quota)ದಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳ ಹೆಸರುಗಳನ್ನು ನಂತರ ಆಡಳಿತ ಮಂಡಳಿಯ ಕೋಟಾದಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಹೆಸರುಗಳನ್ನು ಆಂಗ್ಲ ವರ್ಣಮಾಲೆಯ ಪ್ರಕಾರ ನಮೂದಿಸತಕ್ಕದ್ದು. ಬಿ.ಇಡಿ. ಶಿಕ್ಷಣದ ಪ್ರವೇಶಾತಿ ಸಂಬಂಧ ಸರ್ಕಾರ ಆಯಾಯ ಕಾಲೇಜುಗಳಿಗೆ ಮಾತ್ರ ಅನ್ವಯಿಸುವಂತೆ ಕಳುಹಿಸಿರುವ ಆಯ್ಕೆ ಪಟ್ಟಿ, ಸುತ್ತೋಲೆ, ಮಾರ್ಗಸೂಚಿ, ವಿನಾಯಿತಿ ಸೂಚಿ ಇತ್ಯಾದಿ ದಾಖಲಾತಿಗಳ ಜೆರಾಕ್ಸ್ ಪ್ರತಿಗಳನ್ನು ಪ್ರವೇಶಾತಿ ಪಟ್ಟಿಯೊಡನೆ ತಪ್ಪದೇ ಈ ಕಛೇರಿಗೆ ಸಲ್ಲಿಸತಕ್ಕದ್ದು.

17. ಮೇಲೆ ನಮೂದಿಸಿರುವ ದಿನಾಂಕಗಳಂದು ಸಾರ್ವತ್ರಿಕ ರಜೆ ಇದ್ದಲ್ಲಿ/ಘೋಷಿಸಿದಲ್ಲಿ ನಿಗದಿತ ಕಾರ್ಯಕ್ರಮಗಳು ಮುಂದಿನ ಕಛೇರಿ ಕೆಲಸದ ದಿನ (Next working day) ಪ್ರಾರಂಭವಾಗುತ್ತವೆಂದು ತಿಳಿಯುವುದು.

ಕುಲಸಚಿವರಿಂದ ಕರಡು ಅನುಮೋದಿಸಿದ.

05/01/24

ಉಪಕುಲಸಚಿವ (ಶೈಕ್ಷಣಿಕ)

ಉಪ ಕುಲಸಚಿವರು (ಶೈಕ್ಷಣಿಕ)
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-೫೭೦ ೦೦೫

ಇವರಿಗೆ;

1. ಎಲ್ಲಾ ಬಿ.ಇಡಿ. ಕಾಲೇಜುಗಳ ಪ್ರಾಂಶುಪಾಲರುಗಳಿಗೆ (ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಬಿ.ಇಡಿ. ಕಾಲೇಜಿನ ಪ್ರಾಂಶುಪಾಲರುಗಳು/ ಅವರ ಕಾಲೇಜುಗಳ ಅಧ್ಯಾಪಕರು/ ವಿದ್ಯಾರ್ಥಿಗಳ ಗಮನಕ್ಕೆ ತರಬೇಕೆಂದು ಮತ್ತು ಶೈಕ್ಷಣಿಕ ವೇಳಾಪಟ್ಟಿಯ ಪ್ರಕಾರ ಕ್ರಮ ವಹಿಸಬೇಕೆಂದು ತಿಳಿಸಲಾಗಿದೆ).
2. ಕುಲಸಚಿವ (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರಿಗೆ – ಬಿ.ಇಡಿ. ಪದವಿ ಕೋರ್ಸ್‌ನ ಸೆಮಿಸ್ಟರ್ ಪರೀಕ್ಷೆಗಳು ನಡೆಯುವ ಬಗ್ಗೆ ನಿಮ್ಮ ವತಿಯಿಂದಲೇ ದಿನಾಂಕಗಳನ್ನು ಸೂಚಿಸಿ ಕ್ರಮ ಕೈಗೊಳ್ಳಬೇಕೆಂದು ಕೋರಲಾಗಿದೆ.
3. ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ಗುಲ್ಬರ್ಗ ವಿಶ್ವವಿದ್ಯಾನಿಲಯ, ಗುಲ್ಬರ್ಗ, ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, (ಉನ್ನತ ಶಿಕ್ಷಣ) ಬೆಂಗಳೂರು.
5. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
6. ಡೀನರು, ಶಿಕ್ಷಣ ನಿಕಾಯ, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ, ಮೈವಿವಿ, ಮೈಸೂರು.
7. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಬಿ.ಎಡ್. ಕಾಲೇಜುಗಳು 2024–25ನೇ ಶೈಕ್ಷಣಿಕ ಸಾಲಿನಲ್ಲಿ NCTEಯ ಮಾನ್ಯತೆ ಇಲ್ಲದಿರುವ ಕಾಲೇಜುಗಳಿಗೆ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯದಂತೆ ಪತ್ರಿಕಾ ಪ್ರಕಟಣೆ ಹೊರಡಿಸಲು ತಿಳಿಸಲಾಗಿದೆ.
8. ಮಾನ್ಯ ಕುಲಪತಿ/ಕುಲಸಚಿವರು/ಕುಲಸಚಿವರು(ಪರೀಕ್ಷಾಂಗ) ರವರ ಆಪ್ತ ಸಹಾಯಕರು, ಮೈವಿವಿ, ಮೈಸೂರು.
9. ಕಛೇರಿ ಪ್ರತಿ.

CamScanner